ನಮ್ಮ ಮನೆಯಲ್ಲಿ ನಾನು ಸುಳ್ಳು ಹೇಳಿ ಮೈಸೂರಿಗೆ ಹೊರಟ ಹಾಗೆ ನಟಿಸಿದ್ದೆ. ಆದರೆ ಮೈಸೂರಿಗೆ ಹೋಗದೆ ನೇರವಾಗಿ ನಾವು ರೋಹಿಣಿ ಮತ್ತು ಅವಳ ತಂದೆ ರಮಾನಂದ ಶೆಣೈ ಅವರ ಜೊತೆ ರಾಂಪುರಕ್ಕೆ ಹೋಗಿ ಮದುವೆಯಾಗುವುದೆಂಬ ಪ್ಲಾನನ್ನು ಆಗಲೇ ಸಿದ್ಧಪಡಿಸಿದ್ದೆವು. ನಾನು ತಪ್ಪಿ ಯೂ ಆಮೇಲೆ ಮನೆಯಲ್ಲಿ ರಾಯರ ಸುದ್ದಿಯನ್ನು ಎಂದೂ ಎತ್ತುತ್ತಿರಲಿಲ್ಲ. ಅದು ಮರೆತ ಪ್ರಕರಣ ಎಂಬಂತೆ ನಟಿಸುತ್ತಿದ್ದೆ. ಹಾಗಾಗಿ ರೋಹಿಣಿಯ ಜೊತೆ ನಾನು ಮೈಸೂರಿಗೆ ಹೋಗಿ ಬರುತ್ತೇನೆ ಎಂದಾಗ ಮನೆಯಲ್ಲಿ ಯಾರೂ ಆಕ್ಷೇಪ ಎತ್ತದೆ 'ಪ್ರೇಮ ಪ್ರಕರಣವನ್ನು ಈಕೆ ನಮಗಾಗಿ ಬಿಟ್ಟು ಕೊಟ್ಟಳು' ಎಂಬ ಸಂತೋಷದಲ್ಲಿ ಒಪ್ಪಿಗೆ ಕೊಟ್ಟಿದ್ದರು. ನಾವು ಮೂವರೂ ರಾಂಪುರಕ್ಕೆ ನಿಶ್ಚಯಿಸಿದ ದಿನದಂದು ಹೊರಟು ಸಬ್‌ರಿಜಿಸ್ಟ್ರಾರ್ ಅವರ ಆಫೀಸಿನಲ್ಲಿ ಸಂಬಂಧಪಟ್ಟ ದಾಖಲೆಗಳನ್ನೆಲ್ಲ ಹಾಜರುಪಡಿಸಿದೆವು. ತಿಂಗಳ ಮೊದಲೇ ನಮ್ಮ ಮದುವೆಗೆ ಆಕ್ಷೇಪ ಇದ್ದವರು ತಕರಾರು ಎತ್ತಬಹುದು ಎಂಬ ನೋಟಿಸ್ ಸಬ್‌ರಿಜಿಸ್ಟ್ರಾರ್ ಕಚೇರಿ ಬೋರ್ಡಿನಲ್ಲಿ ಇದ್ದುದನ್ನು ನೋಡಿದ ನಾನು ರಾಯರು ನಮ್ಮ ಮದುವೆಗೆ ಎಷ್ಟು ಶ್ರಮವಹಿಸಿದ್ದವರು ಎಂದು ಹೆಮ್ಮೆ ಪಟ್ಟೆ.

ಸಬ್‌ರಿಜಿಸ್ಟ್ರಾರ್ ಕಚೇರಿಯ ವಿಧಿವಿಧಾನಗಳೆಲ್ಲ ಮುಗಿದ ಮೇಲೆ ನಮ್ಮ ಮದುವೆಯ ಪಾರ್ಟಿ ನಿಮ್ಮ ಹೊಟೇಲಿನಲ್ಲೇ ಇಟ್ಟುಕೊಂಡದ್ದು ಸದಾಶಿವಣ್ಣ. ಆದರೆ ಆಗ ನಿಮಗೆ ನಮ್ಮ ಪರಿಚಯ ಇರಲಿಲ್ಲ. ಆ ದಿನ ಗಡದ್ದಾದ ಪಾರ್ಟಿ, ಕೇವಲ ಐವತ್ತು ಮಂದಿಗೆ ಮಾತ್ರ ಮಾಡಲಾಗಿತ್ತು. ಇವರ ಕಾಲೇಜಿನ ಪ್ರಾಂಶುಪಾಲರು ಮತ್ತು ರಾಯರ ಆಪ್ತ ಸಹೋದ್ಯೋಗಿಗಳು ಹೆಚ್ಚೇಕೆ ಕಾಲೇಜ್ ಟ್ರಸ್ಟಿನ ಅಧ್ಯಕ್ಷರೇ ಆ ಪಾರ್ಟಿಗೆ ಬಂದಿದ್ದರೆಂದು ರಾಯರಿಗೆ ತುಂಬಾ ಖುಷಿಯಾಗಿತ್ತು. ಆ ದಿನ ರಾತ್ರೆ ನಾವು ನಿಮ್ಮ ಹೊಟೇಲಿನಲ್ಲಿ ಉಳಕೊಂಡು ಮರುದಿನ ನಾವು ಗೋಖಲೆ ಸರ್ಕಲಿನ ಪಕ್ಕದಲ್ಲಿದ್ದ ಓಣಿಯಲ್ಲಿ ಆಗಲೇ ರಾಯರು ನೋಡಿ ಕಾದಿರಿಸಿದ್ದ ಬಾಡಿಗೆ ಮನೆಗೆ ಹೋದದ್ದು!' ಎಂದರು ಸರೋಜಮ್ಮ.

'ಹೌದಲ್ಲ?' ಎಂದು ನಕ್ಕ ಸದಾಶಿವ ಶೆಟ್ಟರು, 'ಈಗ ನನಗೆ ಆ ದಿನ ನಡೆದದ್ದೆಲ್ಲ ಮಸುಕು ಮಸುಕಾಗಿ ನೆನಪಾಗುತ್ತಿದೆ' ಎನ್ನುತ್ತಾ 'ಈ ವಿಚಾರವನ್ನು ನಿಮ್ಮ ಮನೆಯವರಿಗೆ ನೀವು ಮತ್ತೆ ಹೇಗೆ ತಿಳಿಸಿದಿರಿ?' ಎಂದು ಪ್ರಶ್ನಿಸಿದರು.

ಸರೋಜಮ್ಮ 'ಇವರು ನಮ್ಮ ಗಾಂಧರ್ವ ವಿವಾಹದ ಫೋಟೋ ಮತ್ತು ರಿಜಿಸ್ಟ್ರೇಶನ್ ಸರ್ಟಿಫಿಕೇಟಿನ ಪ್ರತಿಯನ್ನು ನಮ್ಮ ಅಪ್ಪನಿಗೆ ರಿಜಿಸ್ಟರ್ಡ್ ಪೋಸ್ಟ್ ಮಾಡಿದರಂತೆ. ಅದನ್ನು ನೋಡಿ ಅಪ್ಪ ಹೌಹಾರಿದರಂತೆ. ಅಣ್ಣ ಮಿಲಿಟರಿಯಲ್ಲಿ ಇರುವವನೂ ಓಡಿ ಬಂದನಂತೆ, ಇತ್ಯಾದಿ ಸುದ್ದಿಗಳೆಲ್ಲ ರೋಹಿಣಿಯ ಮೂಲಕ ನಮಗೂ ಬಂತು. ಅದೃಷ್ಟವಶಾತ್ ಅವಳು ಮತ್ತು ಅವಳಪ್ಪನ ಪಾತ್ರ ಈ ಮದುವೆಯಲ್ಲಿ ಇತ್ತು ಎನ್ನುವುದು ಆಗ ನನ್ನಪ್ಪನಿಗೆ ತಿಳಿಯಲೇ ಇಲ್ಲವಂತೆ. ತಿಂಗಳ ಮೇಲೆ ಅದು ತಿಳಿದಾಗ ರಮಾನಂದ ಶೆಣೈಯವರನ್ನು ಗದರಿಸಲಿಕ್ಕೆಂದು ನನ್ನಪ್ಪ ಅವರ ಮನೆಬಾಗಿಲಿಗೆ ಹೋದಾಗ ಶೆಣೈ ಅವರು ಯಾವ ಮುಲಾಜೂ ಇಲ್ಲದೆ 'ನಿಮ್ಮ ಮೇಲೆ ಪೊಲೀಸ್ ಕಂಪ್ಲೇಂಟ್ ಕೊಡುತ್ತೇನೆ. ನನಗೆ ಯಾವುದೇ ರೀತಿಯ ತೊಂದರೆ ಆಗುವುದಾದರೆ ಅದು ನಿಮ್ಮಿಂದ ಮಾತ್ರ. ಎಂದು ದೂರು ನೀಡುತ್ತೇನೆ' ಎಂದರಂತೆ.

'ರೋಹಿಣಿಯ ಅಪ್ಪ ಹಾಗೆ ಮಾಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಆಮೇಲೆ ನಮ್ಮಪ್ಪ ಮಾತ್ರ ಅವರ ಮನೆಬಾಗಿಲಿಗೆ ಹೋಗಿಯೇ ಇಲ್ಲವಂತೆ. ಪೇಟೆಯಲ್ಲಿ ಶೆಣೈ ಅವರನ್ನು ಕಂಡರೂ ಮುಖ ತಿರುಗಿಸಿ ಹೋಗುತ್ತಿದ್ದರಂತೆ'.

ಸರೋಜಮ್ಮ ಇಷ್ಟು ಹೇಳಿ ಮುಗಿಸುವಾಗ 'ಒಳಗಿಂದ ಡ್ರೆಸ್ಸು ಬದಲಾಯಿಸಿ ಹೊರಬಂದ ರಾಯರು, 'ದೊಡ್ಡ ಪುರಾಣ ಕೇಳಿದಿರಿ ಶೆಟ್ಟರೇ. ಸರಿ, ನೀವು ನಡೆಯಿರಿ ಈಗ. ನಾಳೆ ವಾಕಿಂಗ್‌ಗೆ ಬನ್ನಿ' ಎಂದು ಸದಾಶಿವ ಶೆಟ್ಟರನ್ನು ಬೀಳ್ಕೊಟ್ಟರು.

ಮರುದಿನ ಬೆಳಗ್ಗೆ ಎಂದಿನ ಹಾಗೆ ಎದ್ದ ರಾಯರು ತಾನೇ ಗ್ರೀನ್ ಟೀ ತಯಾರಿಸಿ, ಶೆಟ್ಟರಿಗೂ ಕಾಫಿ ತಯಾರಿಸಿ ಇಟ್ಟು ಒಂದೊಂದು ಸಿಪ್ ಟೀಯನ್ನು ಹೀರುತ್ತಾ ಮೊನ್ನೆಯ ದಿನ ಬಂದಿದ್ದ ಜಯಂತಿ ಕುಲಕರ್ಣಿಯವರ ಪತ್ರವನ್ನು ಮತ್ತೆ ಮೇಜಿನ ಡ್ರಾಯರ್‌ನಿಂದ ತೆಗೆದು ನೋಡಹತ್ತಿದರು. ಆ ಪತ್ರವನ್ನು ಓದುತ್ತಿದ್ದಂತೆ ಖಂಡಿತ ತಾನು ಜಯಂತಿ ಅವರಿಗೆ ನೆರವಾಗಲು ಹೋಗಲೇಬೇಕು. ಆದರೆ ಈ ವಿಚಾರವನ್ನು ಸರೋಜಾಳ ಮುಂದಿಡುವುದು ಹೇಗೆ? ಎಂಬ ಆತಂಕದಲ್ಲಿ, ಏನಾದರೂ ಪ್ಲಾನ್ ಹುಡುಕಬೇಕು ಎಂದುಕೊಂಡು ವಾಕಿಂಗ್ ಹೊತ್ತಿನಲ್ಲಿ ಜಯಂತಿ ಕುಲಕರ್ಣಿಯನ್ನು ಫೋನಿನಲ್ಲಿ ಸಂಪರ್ಕಿಸಿ, 'ನಾನು ಬರುವುದು ವಾರವೋ ಹದಿನೈದು ದಿನಗಳೋ ಆದೀತು. ದಯವಿಟ್ಟು ಕ್ಷಮಿಸು ಎನ್ನಬೇಕು' ಎಂದುಕೊಂಡರು. ಇದರಿಂದ ಸ್ವಲ್ಪಮಟ್ಟಿಗೆ ನಿರಾಳವಾದ ಅವರು ಈಗ ಜಯಂತಿಯಲ್ಲಿ ವಿಷಯ ಏನು ಎಂದು ವಿಚಾರಿಸಬೇಕು ಎಂದುಕೊಂಡರು. ವಾಕಿಂಗ್‌ಗೆ ಬರುವ ಶೆಟ್ಟರಲ್ಲಿ ಈ ವಿಚಾರದ ಕುರಿತು ಚರ್ಚಿಸಿದರೆ ತಪ್ಪೇನು ಎಂಬಂತೆ ಆ ಪತ್ರವನ್ನು ಮತ್ತೊಮ್ಮೆ ಓದಿ ತನ್ನ ಜೇಬಿನಲ್ಲಿ ಇರಿಸಿಕೊಂಡರು.

ಸದಾಶಿವ ಶೆಟ್ಟರು ಬಂದವರೇ ರಾಯರಿಗೆ ನಮಸ್ಕರಿಸಿ ಕಾಫಿ ಕಪ್ ಅನ್ನು ಎತ್ತಿಕೊಳ್ಳುವ ಮೊದಲೇ ರಾಯರಿಗೆ 'ಚೆನ್ನಾಗಿ ನಿದ್ರೆ ಬಂದಿರಬೇಕಲ್ಲ ರಾತ್ರೆ!' ಎಂದು ಸಣ್ಣಗೆ ಪ್ರಶ್ನಿಸಿದರು. ಅದರ ಜೊತೆಗೇ 'ಅಕ್ಕ ನೀವು ಹೇಗಿದ್ದೀರಿ? ಊರು ಬಿಡುವ ವಿಚಾರ ಇಲ್ಲ ತಾನೇ?' ಎಂದು ತಮಾಷೆಯಾಗಿ ಸರೋಜಮ್ಮನನ್ನು ಕೂಗಿ ಪ್ರಶ್ನಿಸಿದರು.

ಒಳಗೆ ಅಡುಗೆ ಮನೆಯಲ್ಲಿ ಉದ್ದಿನ ದೋಸೆ ಹೊಯ್ಯಲು ಸಿದ್ಧತೆ ನಡೆಸುತ್ತಿದ್ದ ಸರೋಜಮ್ಮ ಕೈಯಲ್ಲಿದ್ದ ಸೌಟನ್ನು ಹಿಡಿದುಕೊಂಡೇ ಚಾವಡಿಗೆ ಬಂದರು. 'ಯಾರು ಹೇಳಿದರು ನಾವು ಊರು ಬಿಡಲಿಕ್ಕೆ ಇಲ್ಲ ಎಂದು ನಿಮಗೆ?' ಎಂದು ನವಿರಾಗಿಯೇ ಶೆಟ್ಟರನ್ನು ಪ್ರಶ್ನಿಸಿದ ಅವರು, 'ಇಲ್ಲ ಸದಾಶಿವಣ್ಣ, ನಾನು ಇಲ್ಲಿ ಇರಬೇಕಾ? ಬೇಡವಾ? ಎಂಬ ಬಗ್ಗೆ ಇನ್ನೂ ಪೂರ್ತಿ ಫುಲ್‌ಸ್ಟಾಪ್ ಹಾಕಿಲ್ಲ! ಈ ಕೇಸು ಏನಾಗುತ್ತದೆ? ಎಂಥೆಂಥ ತಿರುವು ಪಡೆಯುತ್ತದೆ? ಎಂಬುದರಿಂದ ಅದನ್ನು ನಿರ್ಧರಿಸುವುದು!' ಎಂದರು.

ಶೆಟ್ಟರು 'ಇದು ಒಳ್ಳೆ ಕಷ್ಟಕ್ಕಿಟ್ಟುಕೊಂಡಿತಲ್ಲ ಸರೋಜಕ್ಕ. ಹಾಗಾದರೆ ನಾನೇನು ಮಾಡಬೇಕು ಹೇಳಿ? ಸುಮಾರು ಮೂವತ್ತೈದು ವರುಷಗಳ ಕಾಲ ನಾನು ರಾಂಪುರದ ನಮ್ಮ 'ಶೆಟ್ಟೀಸ್ ಹೊಟೇಲಿ'ನಲ್ಲಿ ಮೇನೇಜರ್ ಎಂದುಕೊಂಡಿದ್ದರೂ ವಾಸ್ತವವಾಗಿ ನಾನು ಆ ಹೊಟೇಲಿನಲ್ಲಿ ಎಲ್ಲವೂ ಆಗಿದ್ದೆ ಅಥವಾ ಅದು ನನ್ನದೇ ಹೊಟೇಲ್ ಎಂಬಂತೆಯೇ ಇದ್ದೆ'. ಆದರೆ ಮುಂದೆ ಏನಾಯಿತು ಎಂದು ಗೊತ್ತಲ್ಲ ನಿಮಗೆ? ಎನ್ನುತ್ತಲೇ 'ನಾನು ಸಣ್ಣವನಿದ್ದಾಗ ಪೋಲಿಯೋಕ್ಕೆ ಒಳಗಾಗಿ ಅಂಗವಿಕಲನಾದೆ. ಎಸ್ಸೆಸ್ಸೆಲ್ಸಿ ತನಕ ಕಷ್ಟದಲ್ಲಿ ಸೀತಾಪುರದ ಹೈಸ್ಕೂಲಿನಲ್ಲೇ ಓದಿದೆ. ಮುಂದೆ ಕಾರ್ಕಳ ಅಥವಾ ಮೂಡಬಿದ್ರೆಯ ಕಾಲೇಜುಗಳಿಗೆ ಹೋಗಲು ನನಗೆ ಸಾಧ್ಯವಿದ್ದಿಲ್ಲ ಮತ್ತು ಅದು ನನ್ನ ಅಪ್ಪ ಅಮ್ಮನಿಗೆ ಇಷ್ಟವೂ ಇರಲಿಲ್ಲ. ಅಷ್ಟರಲ್ಲಿ ನನಗಿಂತ ಎಂಟು ವರುಷ ದೊಡ್ಡವನಿದ್ದ ದೊಡ್ಡಣ್ಣ ಸದಾನಂದ ಎಸ್ಸೆಸ್ಸೆಲ್ಸಿ ಮುಗಿಸಿದವನೇ ಮುಂಬಯಿಗೆ ಹೋಗಿ ಅಲ್ಲಿ ಯಾವುದೋ ಒಂದು ಹೊಟೇಲ್‌ನಲ್ಲಿ ಎರಡು ಮೂರು ವರುಷ ಇದ್ದು, ಹೊಟೇಲ್ ಉದ್ಯಮದ ಒಳಹೊರಗನ್ನು ಚೆನ್ನಾಗಿ ಕಲಿತು ಬಂದಿದ್ದ. ಆಮೇಲೆ ಯಾರದೋ ನೆರವಿನಿಂದ ರಾಂಪುರದಲ್ಲಿ 'ಶೆಟ್ಟೀಸ್ ಹೊಟೇಲ್' ಪ್ರಾರಂಭಿಸಿದ. ಅದೇ ಸುಮಾರಿಗೆ ಎರಡನೇ ಅಣ್ಣ ಶಾಂತರಾಮ ಪಿ.ಯು.ಸಿ.ಯಲ್ಲಿ ಫೇಲಾಗಿ ಮುಂದೆ ಓದುವುದು ಬೇಕೋ ಬೇಡವೋ ಎಂಬ ದ್ವಂದ್ವದಲ್ಲಿದ್ದಾಗ ಅಣ್ಣ ಸದಾನಂದ ಶಾಂತಾರಾಮ ನನ್ನೂ ನನ್ನನ್ನೂ ರಾಂಪುರಕ್ಕೆ ಕಳುಹಿಸಿಕೊಡಿ ಎಂದು ಅಪ್ಪನಿಗೆ ಪತ್ರ ಬರೆದ. ಅದಕ್ಕೆ ಅಮ್ಮ– 'ಸದಾಶಿವ ಇಲ್ಲೇ ಇರಲಿ, ಅವನಿಗೆ ಸರಿಯಾಗಿ ನಡೆಯಲಿಕ್ಕೂ ಆಗುವುದಿಲ್ಲ' ಎಂದು ನನ್ನನ್ನು ಕಳುಹಿಸಲಿಲ್ಲ. ವರುಷದ ಮೇಲೆ ಇಬ್ಬರು ಅಣ್ಣಂದಿರೂ ಒಟ್ಟಿಗೇ ಮನೆಗೆ ಬಂದವರೇ 'ನಮ್ಮ ಹೊಟೇಲ್ ತುಂಬಾ ಅಭಿವೃದ್ಧಿಯಲ್ಲಿದೆ. ನಾವೇ ಅಲ್ಲಿ ಕುಕ್. ಹಾಗಾಗಿ ನಮ್ಮ ತಿಂಡಿ ತಿನಿಸುಗಳು ತುಂಬಾ ಜನಪ್ರಿಯವಾಗಿವೆ' ಎಂದು ಹೇಳಿ, 'ಸದಾಶಿವನು ಹೆಲ್ಪಿಗೆ ಬಂದರೆ ನಮ್ಮ ಬಿಸಿನೆಸ್ ಇಂಪ್ರೂವ್ ಆಗಬಹುದು. ಅದಕ್ಕಾಗಿ ಸದಾಶಿವ ಬರಲಿ. ಅವನನ್ನು ಕ್ಯಾಷಿಯರ್ ಸೀಟಿನಲ್ಲಿ ಕುಳಿತುಕೊಳ್ಳಿಸುತ್ತೇವೆ. ತಪ್ಪಿಯೂ ಅವನನ್ನು ದುಡಿಸುವುದಿಲ್ಲ' ಎಂದು ಅಪ್ಪನಿಗೆ ವಾಗ್ದಾನ ಮಾಡಿದರು. ಆಗ ಅಮ್ಮ 'ಬೇಡ' ಎಂದು ಹೇಳಿದರೂ ಅಪ್ಪ 'ನಿನ್ನ ದೊಡ್ಡ ಮಕ್ಕಳೇನು ರಕ್ಕಸರಾ?' ಎಂದು ಅಮ್ಮನನ್ನು ಗದರಿ ನನ್ನನ್ನು ರಾಂಪುರಕ್ಕೆ ಕಳುಹಿಸಿ ಕೊಟ್ಟಿದ್ದರು. ನನಗೆ ಕ್ಯಾಷಿಯರ್ ಸ್ಥಾನ ಸಿಕ್ಕಿದರೂ ಆ ಸ್ಥಾನ ಬಿಟ್ಟು ಆಚೀಚೆ ಹೋಗಲು ನನಗೆ ಅವಕಾಶವೇ ಇರಲಿಲ್ಲ ಎನ್ನುವಷ್ಟು 'ಬಿಜಿನೆಸ್' ಆ ಹೊಟೇಲಿನಲ್ಲಿ ಇತ್ತು. ಇದು ನನಗೆ ಬೇಡ ಅನಿಸಿದರೂ ನಾನು ಅಲ್ಲಿಂದ ಬಿಟ್ಟು ಬರುವ ಹಾಗಿರಲಿಲ್ಲ. 'ಎರಡು ದಿನದ ಮಟ್ಟಿಗೆ ಊರಿಗೆ ಹೋಗಿಬರಬೇಕು' ಅಂದರೆ ದೊಡ್ಡಣ್ಣ 'ನಿನಗೆ ಊರಲ್ಲಿ ಹೆಂಡ್ತಿ ಮಕ್ಕಳಿದ್ದಾರಾ? ಸುಮ್ಮಿರು' ಎಂದು ನನ್ನ ಬಾಯಿ ಮುಚ್ಚಿಸುತ್ತಿದ್ದರು' ಎಂದರು.

(ಸಶೇಷ)